International Journal of Kannada Research
www.kannadajournal.com

ISSN: 2454–5813
IJKR 2018; 4(3): 05-06
© 2018 IJKR
www.kannadajournal.com
Received: 02-05-2018
Accepted: 03-06-2018

**ಹನುಮಂತಪ್ಪ.ಆರ್.**
ಸಂಶೋಧನ ವಿದ್ಯಾರ್ಥಿ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

**Correspondence**
**ಹನುಮಂತಪ್ಪ.ಆರ್.**
ಸಂಶೋಧನ ವಿದ್ಯಾರ್ಥಿ ಡಾ. ಆರ್.ಸಿ. ಹಿರೇಮಠ ಕನ್ನಡ ಅಧ್ಯಯನಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕುವೆಂಪು 'ಜಲಗಾರ' ಏಕಾಂಕ ನಾಟಕದಲ್ಲಿ ಕಾಯಕ ತತ್ವ

**ಹನುಮಂತಪ್ಪ.ಆರ್.**

ಜಲಗಾರ 1928 ರಲ್ಲಿ ಕುವೆಂಪು ಅವರಿಂದ ರಚಿತವಾದ ಒಂದು ಏಕಾಂಕ ನಾಟಕವಾಗಿದೆ. ಭೂದೇವಿ, ಶಿವ, ಜಲಗಾರ, ರೈತ, ಕಬ್ಬಿಗ, ಯುವಕ, ತಿರುಕ, ಭಟ್ಟ ಬಾಲಕರು, ಹಳ್ಳಿಯ ಹುಡುಗಿ, ಇಬ್ಬರು ಪಾರ್ವರು, ಇಬ್ಬರು ತರುಣರು ಇಲ್ಲಿನ ಪಾತ್ರಗಳಾಗಿವೆ. ಕೇವಲ ಎರಡು ದೃಶ್ಯಗಳಲ್ಲಿ 26 ಪುಟಗಳಲ್ಲಿ ಇದು ನಿರೂಪಿತವಾಗಿದೆ. 'ಜಲಗಾರ' ವಿಭಿನ್ನ ದೃಷ್ಟಿಗಳಲ್ಲಿ ಮುಖ್ಯವಾಗಿರುವ ನಾಟಕವಾಗಿದೆ. ಇಲ್ಲಿ ಪುರೋಹಿತಶಾಹಿಯ ನಿರಾಕರಣೆ, ಕೋಮು ಸೌಹಾರ್ದತೆ, ಕಂದುಚಾರಗಳಿಗೆ ವಿರೋಪ ಮುಂತಾದ ಅಂಶಗಳ ಜೊತೆಗೆ 'ಕಾಯಕ ಸಂಸ್ಕೃತಿ' ಮೌಲ್ಯದ ಪ್ರಬಲವಾದ ಪ್ರತಿಪಾದನೆಯಿರುವುದು ಕಂಡುಬರುತ್ತದೆ. ನಾಟಕದ ಎರಡು ದೃಶ್ಯದ ಆರಂಭದಲ್ಲಿ ಭೂದೇವಿ ಹಾಡುವ ಹಾಡು, ರೈತನ ಹಾಡು, ಕಬ್ಬಿಗನ ಹಾಡುಗಳು ನಾಟಕದುದ್ದಕ್ಕೂ ಕಂಡುಬರುತ್ತವೆ. ಇವು ಭಾವಗೀತಾತ್ಮಕತೆ, ಕಥನ ಕದನಗೀತೆ ಮಾದರಿಯಲ್ಲಿದ್ದು ನಾಟಕೀಯತೆಯನ್ನೂ ಒಳಗೊಂಡಿರುವುದರಿಂದ ಇದೊಂದು ಗೀತ ನಾಟಕವೆಂದೇ ಕರೆಯಬಹುದು. ಮೊದಲನೆ ದೃಶ್ಯ ಬೆಳಗಿನ ಹೊತ್ತು ನಡೆದರೆ ಎರಡನೆಯ ದೃಶ್ಯ ಸಂಜೆಯಲ್ಲಿ ನಡೆಯುವುದು. ಒಟ್ಟಾರೆ ವೇಲೂರಿನ ಜಲಗಾರನೊಬ್ಬನ ಸುತ್ತ ಇಡಿ ಹಗಲಿನಲ್ಲಿ ನಡೆದ ಘಟನೆಯನ್ನು ಆದರಿಸಿ 'ಜಲಗಾರ' ನಾಟಕ ರಚಿತವಾಗಿದೆ.

ಜಲಗಾರ ಈ ನಾಟಕದಲ್ಲಿ ಕೇಂದ್ರ ಪಾತ್ರವಾಗಿದ್ದಾನೆ. ಅದೊಂದು ಜಾತ್ರೆಯ ದಿನ. ಜಾತ್ರೆಯದಿನದಂದು ಸಹಜವಾಗಿ ರೈತರು, ಪುರೋಹಿತರು, ಮಕ್ಕಳು, ಯುವಕರು ಹೀಗೆ ಸಮಾಜದ ವಿವಿಧ ವರ್ಗದ ಜನರು ಶಿವನ ಗುಡಿ, ಜಾತ್ರೆಯ ಸಂಭ್ರಮ ಸಡಗರದಲ್ಲಿ ಕ್ರಿಯಾಶೀಲರಾಗಿದ್ದಾರೆ. ಆದರೆ ಜಲಗಾರ ಮಾತ್ರ ಭಿನ್ನವಾಗಿ ಕಾಣಿಸುತ್ತಾನೆ. ಬೀದಿಗುಡಿಸುವುದು, ಇವನ ಕಾಯಕ, ತನ್ನ ನಿತ್ಯ ಕಾಯಕವಾದ ಊರನು ಪೊರಕೆಯಿಂದ ಶುಚಿಗೊಳಿಸುವ ಕಾಯಕದಲ್ಲಿ ತೊಡಗಿದ್ದಾನೆ. ಅಲ್ಲದೆ ಇವನೊಬ್ಬ ಶಿವಭಕ್ತನಾಗಿದ್ದಾನೆ. ಜಾತ್ರೆಯ ದಿವಸ, ವಿಶೇಷವಾದ ಪೂಜೆ ರಥೋತ್ಸವಗಳು ನಡೆಯುತ್ತವೆ. ಆದರೆ ಜಲಗಾರ ಅಸ್ಪೃಶ್ಯನಾಗಿದ್ದರಿಂದ ಅಲ್ಲಿ ಭಾಗವಹಿಸಲು ಮತ್ತು ದೇವಾಲಯದ ಸಮೀಪ ಸುಳಿಯುವುದು ಪುರೊಹಿಶಾಹಿಯ ಬಲದಿಂದಾಗಿ ನಿಸಿದ್ಧವಾಗಿದೆ. ಜಲಗಾರ ಚಿಂತೆಯಿಲ್ಲದೆ ಮನದಲ್ಲಿಯೇ ಶಿವಧ್ಯಾನ ಮಾಡುತ್ತಾ, ಸೃಷ್ಟಿಯ ಸೌಂದರ್ಯವನ್ನು ಸವಿಯುತ್ತಾ ಹಾಡುತ್ತಾ, ತನ್ನ ಕಾಯಕದಲ್ಲಿ ನಿರತನಾಗಿರುತ್ತಾನೆ. ದಾರಿಯಲ್ಲಿನ ಯಾತ್ರಿಕರೆಲ್ಲಾ ಜಲಗಾರನನ್ನು ಕುರಿತು ವಿವಿಧ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ. ರೈತ 'ಶಿವಗುಡಿಯ ಜಾತ್ರೆ, ಬರುವುದಿಲ್ಲವೆ ನೀನು? ಎಂದು ಕೇಳುತ್ತಾ ಅವನನ್ನು ಜಾತ್ರೆಗೆ ಆಹ್ವಾನ ಮಾಡುತ್ತಾನೆ. ಆದರೆ ಕಾಯಕ ನಿರತನಾದ ಜಲಗಾರ ಒಲ್ಲೆ ಎನ್ನುತ್ತಾ ಹೀಗೆ ಪ್ರತಿಕ್ರಿಯಿಸುತ್ತಾನೆ.

> ಕರ್ಮವಾರಾಧನೆ, ಸೇವೆಯೇ ಪೂಜೆ
> ನೆನ್ನ ಭಾಗಕೆ ಪುರಕೆ ಆರತಿ. ಗುಡಿಸುವುದೆ
> ನನ್ನ ದೇವರ ಪೂಜೆ (ಜಲಗಾರ ಪುಟ ಸಂಖ್ಯೆ 5)

ಎನ್ನುತ್ತಾ ನನ್ನ ಶಿವ ಕರ್ಪುರ, ಮಂಗಳಾರತಿ, ಹೂವುಗಳಲ್ಲಿಲ್ಲ ಬದಲಾಗಿ ನನ್ನ ಈ ಮಣ್ಣಿನಲ್ಲಿಹನು, ಕೊಳೆತ ಕಸದಲ್ಲಿರವನು, ನಾನೆಲ್ಲಿರುವೆನೋ ಅಲ್ಲೆ ಇಹನು. ನನ್ನದೆಯೇ ದೇಗುಲ ಭಕ್ತಿಯೆ ಪೂಜೆ, ನಾನೆಲ್ಲಿ ಸತ್ಕಾರ್ಯವೆಸಗುವೆನೊ ಅಲ್ಲಿ ಗೋಚರಿಸುವನು ಎಂಬ ಸದಾಶಯದಿಂದ ಕಾಯಕದಲ್ಲಿಯೇ ಶಿವನು ಕಾಣುತ್ತಾನೆಂಬ ಆಶಯವನ್ನು ಅಭಿವ್ಯಕ್ತಿಸುತ್ತಾನೆ. ರೈತ ತನ್ನ ಅಂದಿನ ಕಾಯಕವನ್ನು ನಿಲ್ಲಿಸಿ ಶಿವಗುಡಿಗೆ ಹೊರಟ ರೈತನ ಕುರಿತು ಹೇಳು ಮಾತು ಹೀಗಿದೆ.

"ಗುಡಿಗೆ ಹೋಗುವೆಯೇನು? ನಿನ್ನ ನೇಗಿಲ ಗೆರೆಯ
ದಿವ್ಯ ದೇವಾಲಯದಿ ಶಿವನ ಕಾಣೆಯ ನೀನು?
ಉಳುವಾಗ, ನೆಡುವಾಗ ಪೂಜೆ ಮಾಡುವೆ ನೀನು.
ದೇಗುಲದ ಪೂಜಕನು ಬೈಗಿನಲಿ ಬೆಳಗಿನಲಿ
ಪೂಜಿಸಿದರೇನಂತೆ? (ಜಲಗಾರ ಪುಟ ಸಂಖ್ಯೆ 6)

ಎಂಬ ಜಲಗಾರನ ಪ್ರಶ್ನೆಯಲ್ಲಿ ಕಾಯಕ ತತ್ವದ ಪ್ರತಿಪಾದನೆಯಿದೆ. ಅಲ್ಲದೆ ಕಾಯಕ, ಶ್ರಮದ ಮೂಲಕ ದೈವತ್ವದ ಸಾಕ್ಷಾತ್ಕಾರವನ್ನು ಕಾಣುತ್ತೇವೆಂಬ ನಿಲುವು ಇದರಿಂದ ಸ್ಪಷ್ಟವಾಗುತ್ತದೆ. "ನಮ್ಮ ಜೀವವೇ ನಿತ್ಯಪೂಜೆ; ನಮ್ಮ ಕರ್ಮವೇ ನಿತ್ಯಯೋಗ" ಆಗಬೇಕೆಂದು ರೈತನನ್ನು ಎಚ್ಚರಿಸುತ್ತಾನೆ. ನಂತರ ಯುವಕನ ಪ್ರವೇಶವಾಗುತ್ತದೆ. ಜಲಗಾರನು ಈ ಜಾತ್ರೆಯ ದಿನವೂ ದುಡಿಯುತ್ತಿರುವುದನ್ನು ಕಂಡು ಆತನನ್ನು ಜಾತ್ರೆಯ ಸಂಭ್ರಮದಲ್ಲಿ ಪಾಲ್ಗೊಳ್ಳುವಂತೆ ಕೊರುತ್ತಾನೆ. ಅದಕ್ಕೆ ಜಲಗಾರನ ಪ್ರತಿಕ್ರಿಯೆ ಹೀಗಿದೆ: "ವಿಶ್ರಾಂತಿಯೊಂದು ದಿನ; ಕರ್ಮಕಾಲದಂತ್ಯದವರೆಗೆ. ಒಂದು ದಿನ ಜಾತ್ರೆ; ಅದಕ್ಕಾಗಿ ಯುಗ ಯುಗದ ಯಾತ್ರೆ." ಎಂಬ ಜಲಗಾರನ ಮಾತುಗಳು ಧ್ವನಿಪೂರ್ಣವಾಗಿದೆ. ಒಬ್ಬ ಭಟ್ಟ ಮತ್ತು ಇಬ್ಬರು ತರುಣರಲ್ಲಿ ಬಿಕ್ಷುಕ ಕಾಸುಬೇಡಿದಾಗ ಭಟ್ಟನಾದರೋ ಬೈದುಹೋದ ಇವನು (ತರುಣ) ಒದ್ದೇ ಹೋಗುತ್ತಾನೆ. ಹಸಿವೆಯಿಂದ ಅನ್ನಕ್ಕಾಗಿ ಬೇಡುವ ತಿರುಕನನ್ನು ಕಂಡು–

ಬಡವರಿಗೆ ಬಡವರಲ್ಲದೆ ಬೇರೆಗತಿಯುಂಟೆ?
ಲೋಕದಲಿ ಕಂಬನಿಯನೊಂದನೊರೆಸಿದ ನರನೆ
ಧನ್ಯ! ನಿಟ್ಟುಸಿರನೊಂದ ಸಂತೈಸುವನೆ!
ಮಾನ್ಯ! ಹಸಿದ ಹೊಟ್ಟೆಗೆ ಮರುಗಿ ತುತ್ತೊಂದ
ನೀಡುವನೆ ಶಿವನಿಗೆಣೆ! (ಜಲಗಾರ ಪುಟ.ಸಂ. 13)

ಎನ್ನುವ ಜಲಗಾರ ಮಾತುಗಳು ಮನುಷ್ಯ ಮನುಷ್ಯನಿಗೆ, ಬಡವ ಬಡವನಿಗೆ ಸಹಾಯ ಮಾಡುವುದು ಕರ್ತವ್ಯ ಎಂದು ಹೇಳುತ್ತಾ ಬಿಕ್ಷುಕನ ಬಳಿ ಹೋಗಿ ತನ್ನ ಅನ್ನದಲ್ಲಿಯೇ ನಿನಗೆ ಮುಷ್ಠಿ ಅನ್ನ ಕೊಟ್ಟು ಪೂಜೆ ಮಾಡುತ್ತೇನೆ. ನೀನೆನ್ನ ಸೋದರ, ನೀನೆನ್ನದೇಗುಲ, ಪರಶಿವ! ಏಳು ಎಂದು ಕೈಹಿಡಿದು ನಡೆಸಿಕೊಂಡು ಹೋಗುವ ಆತನಲ್ಲಿ ಸಹಾಯಮಾಡುವ ಕರ್ತವ್ಯದ ಗುಣವಿದೆ.

ಒಂದು ಧರ್ಮದ ಕಿರಿಯ ಕಾರ್ಯಶತಕೋಟಿ
ಸೂರ್ಯರಿಗೆ ಬೆಳಕು; ಲೋಕ ಲಕ್ಷಕೆ ಜೀವ!
ನಮ್ಮ ಬಾಳಿದು ಬರಿಯ ಮಾಯೆಯೆಲ್ಲ!
ನಮ್ಮ ಕರ್ಮವು ಬರಿಯ ಕನಸಲ್ಲ! (ಜಲಗಾರ ಪುಟ ಸಂ. 16)

ಎಂಬ ಜಲಗಾರನ ಮಾತುಗಳಲ್ಲಿ ಯಾವ ಕೆಲಸವೂ ದೊಡ್ಡದಲ್ಲ. ಯಾವ ಕೆಲಸವೂ ಚಿಕ್ಕದಲ್ಲ. ಅವರವರ ಪಾಲಿಗೆ ಬಂದ ಕಾರ್ಯವನ್ನು ಶ್ರದ್ಧೆಯಿಂದ ಮಾಡಬೇಕೆನ್ನುವ ಕಾಯಕ ತತ್ವದ ಪ್ರತಿಪಾದನೆಯಿದೆ. ಜಾತ್ರೆಯಲ್ಲಿನ ಸಾವಿರಾರು ಮಂದಿಗೆ ಗುಡಿಯಲ್ಲಿ ಕಾಣದ ಶಿವ 'ಎನ್ನಂತರಂಗದಲ್ಲಿ ನಿಂತು ನೀನು ಮೈದೋರ್ವೆ' ಎಂದು ಬೇಡಿಕೊಳ್ಳುವ ಜಲಗಾರನ ಕಾಯಕ ನಿಷ್ಠೆಗೆ ಮೆಚ್ಚಿ ಶಿವ ಜಲಗಾರನ ವೇಷದಲ್ಲಿಯೇ ಪ್ರತ್ಯಕ್ಷವಾಗುತ್ತಾನೆ. ನೀನು ಯಾರು ಎಂದು ಕೇಳುವ ಜಲಗಾರಿನಿಗೆ "ಊರತೋಟಿಯು ನೀನು ಜಗದ ತೋಟಿಯು ನಾನು.... ನೀನೆ ನಾನಾಗಿಹೆನು! ನಾನೇ ನೀನಾಗಿರುವೆ!" ಎಂಬ ಶಿವನ ಮಾತುಗಳಲ್ಲಿ ಶಿವಕಾಯಕದ ಸಂಸ್ಕೃತಿಯೂ ಗೋಚರಿಸುತ್ತದೆ. ಇಲ್ಲಿ ಭಕ್ತ ಮತ್ತು ಶಿವನ ಆಲಿಂಗನವೂ ನಾಟಕದ ಕೊನೆಯಲ್ಲಿ ಆಗುತ್ತದೆ. ಹರಿಹರನ ಕುಂಬರ ಗುಂಡಯ್ಯನ ರಗಳೆಯಲ್ಲಿ ಕಾಯಕಯೋಗಿ ಗುಂಡಯ್ಯನಿಗೆ ಶಿವ ಒಲಿದಂತೆ ಜಲಗಾರ ನಾಟಕದಲ್ಲಿಯೂ ಕಾಯಕಯೋಗಿ ಜಲಗಾರನಿಗೂ ಶಿವ ಒಲಿದಿರುವುದರಲ್ಲಿ ಸಾಮ್ಯತೆಯಿದೆ.

ಒಟ್ಟಾರೆ ಬೀದಿಗುಡಿಸುವ ಜಲಗಾರನೊಬ್ಬನ ಮಾನಸಿಕ ಎತ್ತರವನ್ನು ಜಲಗಾರ ನಾಟಕ ಚಿತ್ರಿಸುತ್ತದೆ. ತನ್ನ ನಿತ್ಯದ ಕಾಯಕದಲ್ಲಿ ಮಗ್ನನಾಗಿ, ಅದರೊಳಗೇ ದೇವನನ್ನು ಕಂಡ ಕರ್ಮಯೋಗಿಯಾಗಿದ್ದಾನೆ. ಇಲ್ಲಿನ ಜಲಗಾರ ಕವಿಯ ಪ್ರತಿಭೆಯಿಂದ ಮೂಡಿದ ಸಾಂಕೇತಿಕ ಮೂರ್ತಿಯಾಗಿದ್ದಾನೆ. ದೇವರು, ಧರ್ಮ, ಮತ, ದೇವಾಲಯ, ಜಾತ್ರೆ, ರಥೋತ್ಸವ ಇವುಗಳ ಹೆಸರಿನಲ್ಲಿ ದೀನದಲಿತರು ಹೇಗೆ ಶೋಷಣೆಗೆ ಗುರಿಯಾಗಿದ್ದಾರೆಂಬುದನ್ನು ನಾಟಕ ಚಿತ್ರಿಸುತ್ತದೆ. ನಿಜವಾದ ದೈವ ಸ್ವರೂಪವೇನು ಎಂಬುದು ಜಲಗಾರ ನಾಟಕದ ವಸ್ತುವಾಗಿದ್ದು, ಇಲ್ಲಿನ ಜಲಗಾರ ಬಡವ, ಅಸ್ಪೃಶ್ಯ, ಬೀದಿಗುಡಿಸುವವ, ಆದರೂ ಪ್ರಾಮಾಣಿಕನು. ಕೈಲಾದವರಿಗೆ ಸಹಾಯಮಾಡುವ ಧರ್ಮ ಬುದ್ಧಿಯುಳ್ಳವ ಆದ್ದರಿಂದ ಇವನಿಗೆ ದೈವ ಸಾಕ್ಷಾತ್ಕಾರವಾಯಿತು. ಇವನು ತಾನೇ ಶಿವನ ಸ್ವರೂಪಿಯಾಗುತ್ತಾನೆ.

**ಆಕರ ಗ್ರಂಥಗಳು**

1. ಕುವೆಂಪು: ಜಲಗಾರ: ಉದಯರವಿ ಪ್ರಕಾಶನ ಮೈಸೂರು, 2012.
2. ಎಸ್.ವಿ. ಪರಮೇಶ್ವರಭಟ್ಟ: ರಸಋಷಿ ಕುವೆಂಪು ಸಂಪುಟ 3– ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1996.
3. ಗಂಗೋತ್ರಿ: ಕುವೆಂಪು ಅಭಿನಂದನ ಗ್ರಂಥ: ಗೀತಾ ಬುಕ್‌ಹೌಸ್ ಮೈಸೂರು 1968.
4. ಡಾ. ಕಾ.ವೆಂ. ಶ್ರೀನಿವಾಸಮೂರ್ತಿ: ಕುವೆಂಪು ನಾಟಕಗಳು ಮತ್ತು ಸಮಕಾಲೀನತೆ: ಜನಕಲಾ ಪಬ್ಲಿಕೇಶನ್ ಕೋಲಾರ, 2013.